ಅ.ದಾ. ನಂ. 323/23                                                    ಪಿ .ಡಬ್ಲ್ಯೂ-1

ದಿನಾಂಕಃ 28.01.2026 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ ಎನ್ ವಕೀಲರಿಂದಃ**

1. ವಾದಿ ನನ್ನ ಹೆಂಡತಿ. ಪ್ರತಿವಾದಿ ನನ್ನ ವಿರುದ್ಧ ಸ.ನಂ.52 ಬ್ಲಾಕ್ ನಂ.1 ರ 1 ಎಕರೆ 20 ಗುಂಟೆಗೆ ಸಂಬಂಧಪಟ್ಟಂತೆ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಒ.ಎಸ್.156/19 ರಂತೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಹಾಜರಾಗಿರುತ್ತೇನೆ ಎಂದರೆ ಸರಿ. ಸದರಿ ದಾವೆ ಪುರಸ್ಕಾರವಾಗಿರುತ್ತದೆ ಎಂದರೆ ಸರಿ. ಒ.ಎಸ್.156/19 ರಲ್ಲಿ ಸಲ್ಲಿಸಿರುವ ತಕರಾರಿನಲ್ಲಿ ಒತ್ತುವರಿಯ ಬಗ್ಗೆ ತಿಳಿಸಿದ್ದೀರ ಎಂದರೆ ಇಲ್ಲ. ಒ.ಎಸ್.156/19 ರಲ್ಲಿ ತಕರಾರನ್ನು ಸಲ್ಲಿಸುವ ಸಮಯದಲ್ಲಿ ಒತ್ತುವರಿಯ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿ. ಆದರೂ ಸಹ ನಾನು ಒತ್ತುವರಿಯ ಬಗ್ಗೆ ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ತಕರಾರು ಸಲ್ಲಿಸಬೇಕು ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವಾ ಪ್ರತಿಯಲ್ಲಿ ಒ.ಎಸ್.156/19 ರ ಬಗ್ಗೆ ತಿಳಿಸಿದ್ದೀರ ಎಂದರೆ ಇಲ್ಲ.

2. ದಾವಾ ಸ್ವತ್ತನ್ನು ಯಾವಾಗ ಖರೀದಿಸಿರುತ್ತೀರ ಎಂದರೆ 2008. 2008 ರಲ್ಲಿ ಸ್ಕೆಚ್ಚನ್ನು ಮಾಡಿಸಿ ದಾವಾ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿ. ಸದರಿ ಸ್ಕೆಚ್ಚಿನ ಬ್ಲಾಕ್ ನಂ.3 ರ ಪೂರ್ವಕ್ಕೆ ಪ್ರತಿವಾದಿಯ ಜಮೀನು, ಪ-ಸಹರಾ ಎಸ್ಟೇಟ್, ಉ-ಪುಟ್ಟೇಗೌಡ, ದ-ನಲ್ಲೂರು ಗಡಿ ಎಂದು ತೋರಿಸಿರುತ್ತಾರೆ ಎಂದರೆ ಸರಿ. ಸದರಿ ಸ್ಕೆಚ್ಚಿನಲ್ಲಿ ಒತ್ತುವರಿಯ ಬಗ್ಗೆ ಕಾಣಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಲಾಗಿ ಸದರಿ ಸ್ಕೆಚ್ಚನ್ನು 2008 ರಲ್ಲಿ ದಾವಾ ಸ್ವತ್ತನ್ನು ಖರೀದಿ ಮಾಡಿದಾಗ ಮಾಡಿಸಿರುವ ಸ್ಕೆಚ್ ಎಂದರೆ ಸರಿ. ಸದರಿ ಸ್ಕೆಚ್ಚನ್ನು ಸಾಕ್ಷಿ ಗುರುತಿಸಿದ ಕಾರಣ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ದಾವಾ ಸ್ವತ್ತನ್ನು ಖರೀದಿಸಿದಾಗ ಒತ್ತುವರಿ ಇರಲಿಲ್ಲ. ಅದೇ ದಿನ ದಾವಾ ಸ್ವತ್ತಿನ ಪೂರ್ವದಲ್ಲಿ ಸ.ನಂ.80ರಲ್ಲಿ 20 ಗುಂಟೆ ಜಮೀನನ್ನು ಪ್ರತಿವಾದಿ ಅವರ ಅಣ್ಣನಿಂದ ಕ್ರಯದ ಕರಾರು ಮಾಡಿಕೊಂಡಿರುತ್ತಾರೆ. ನಂತರ ನಮ್ಮ ಜಮೀನನ್ನು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 20 ಗುಂಟೆಯ ಜಮೀನಿನ ಪೂರ್ವಕ್ಕೆ ಏನಿದೆ ಎಂದರೆ ಪ್ರತಿವಾದಿಯ ಸ.ನಂ.52 ಜಮೀನು. ಸ.ನಂ.52 ರ ಜಮೀನಿಗೂ ದಾವಾ ಸ್ವತ್ತಿನ ನಡುವೆ ಪ್ರತಿವಾದಿಯ ಅವರ ಅಣ್ಣನಿಂದ ಕ್ರಯದ ಕರಾರು ಮಾಡಿಸಿಕೊಂಡಿರುವ 20 ಗುಂಟೆ ಜಮೀನಿದೆಯೇ ಎಂದರೆ ಹೌದು. ದಾವಾ ಪತ್ರದಲ್ಲಿ 20 ಗುಂಟೆ ಜಮೀನಿನ ಬಗ್ಗೆ ತಿಳಿಸಿದ್ದೀರ

ಅ.ದಾ. ನಂ. 323/23 ಪಿ .ಡಬ್ಲ್ಯೂ- 1

ಎಂದರೆ ತಿಳಿಸಿರುತ್ತೇನೆ.

3. ದಿ.07.06.2011 ರಲ್ಲಿ ಒತ್ತುವರಿಯ ಬಗ್ಗೆ ತಿಳಿದಿರುತ್ತದೆ ಎಂದು ದಾವಾ ಪತ್ರದಲ್ಲಿ ತಿಳಿಸಿದ್ದು ಹಾಗಾದರೆ 2011 ರಲ್ಲಿ ದಾವೆ ಏಕೆ ಹೂಡಲಿಲ್ಲ ಎಂದರೆ ಮೌಖಿಕವಾಗಿ ಸ್ವಾಧೀನ ಬಿಡುವಂತೆ ಊರಿನ ಮುಖಂಡರ ಸಮ್ಮುಖದಲ್ಲಿ ಕೇಳಿರುತ್ತೇವೆ. 2011 ರಲ್ಲಿ ಪ್ರತಿವಾದಿಗೆ ನೋಟೀಸ್ ನೀಡಿದ್ದೀರ ಎಂದರೆ ನೋಟೀಸ್ ನೀಡಿರುವುದಿಲ್ಲ ಆದರೆ ದಾವೆ ಹೂಡುವ 2 ವರ್ಷದ ಮುಂಚೆ ಪ್ರತಿವಾದಿ ಸ್ವಾಧೀನ ಬಿಟ್ಟುಕೊಡುವುದಿಲ್ಲ ಎಂದು ತಿಳಿಸಿದ ನಂತರ ದಾವೆ ಸಲ್ಲಿಸಿರುತ್ತೇವೆ. 2019 ರಲ್ಲಿ ಪ್ರತಿವಾದಿ ದಾವೆ ಸಲ್ಲಿಸಿದ ನಂತರ ಸ್ವಾಧೀನಕ್ಕಾಗಿ ದಾವೆ ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಆದ ಕಾರಣ ಕಾಲ ಪರಿಮಿತಿ ಮುಗಿದ ನಂತರ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

4. 20 ಗುಂಟೆ ಜಾಗದ ಪಶ್ಚಿಮ ದಿಕ್ಕಿನಲ್ಲಿ ಪ್ರತಿವಾದಿ ಯಾವುದೇ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸ.ನಂ.52 ರ 1 ಎಕರೆ 20 ಗುಂಟೆ ಜಾಗದಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸುಳ್ಳು ನಕಾಶೆಯನ್ನು ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಒತ್ತುವರಿ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕವಾಗಿ ಚೆಕ್ಕುಬಂದಿ ತಿಳಿಸಿದ್ದೀರ ಎಂದರೆ ಇಲ್ಲ. ಪ್ರತಿವಾದಿಯ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.